ತೆಂಗಿನ ನುಸಿರೋಗ ಹಾಗೂ ಕಪ್ಪುತಲೆ ಹುಳದಿಂದ ಬರುವ ರೋಗವನ್ನು ನಿಯಂತ್ರಿಸುವುದು

409 (3981) ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಈಗಿನ ತೆಂಗಿನ ನುಸಿ ರೋಗ ಮತ್ತು ಕಪ್ಪುತಲೆ ರೋಗವನ್ನು ನಿಯಂತ್ರಿಸಲು ಸರ್ಕಾರದ ವತಿಯಿಂದ ಔಷಧಿ ಸಿಂಪಡಿಸುವಿಕೆ ಮುಂತಾದ ಕಾರ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ; ವಿವರ ನೀಡುವುದು;

ಆ) ಹಾಗಿದ್ದಲ್ಲಿ, ಸರ್ಕಾರವು ಬದಲಿ ವ್ಯವಸ್ಥೆಯೇನಾದರೂ ಮಾಡಲಾಗಿದೆಯೇ;

ಇ) ಕಳೆದ ಸಾಲಿನಲ್ಲಿ ಈ ದಿಕ್ಕಿನಲ್ಲಿ ಸರ್ಕರದಿಂದ ಖರ್ಚಾದ ಹಣ ಎಷ್ಟು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ತೆಂಗಿನ ಮರಗಳ ಆರೋಗ್ಯ ಸುಧಾರಿಸಲು ಮತ್ತು ರೋಗ ನಿರೋಧ ಶಕ್ತಿ ವೃದ್ಧಿಸಲು ಸಮಗ್ರ ಬೇಸಾಯ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಅರಿವು ಮೂಡಿಸಲು ರಾಜ್ಯಾದ್ಯಂತ ರೈತರ ತೋಟಗಳಲ್ಲಿ 100 ಬ್ಲಾಕ್ ಪ್ರಾತ್ಯಕ್ಷತೆ ಹಾಗು 650 ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರಾರಂಭಿಕವಾಗಿ 12 ಬ್ಲಾಕ್ ಪ್ರಾತ್ಯಕ್ಷತೆಗಳು ಹಾಗೂ 24 ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಉಳಿದ ಬ್ಲಾಕ್ ಪ್ರಾತ್ಯಕ್ಷತೆಗಳನ್ನು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಲು ಪೂರ್ವ ಸಿದ್ಧತೆ ಮಾಡಲಾಗುತ್ತಿದೆ. ಇಲಾಖಾ ಪ್ರಾತ್ಯಕ್ಷತೆಗಳಲ್ಲಿ ತೆಂಗಿನ ನುಸಿ ನಿರ್ವಹಣೆಗೆ ಜೈವಿಕ ಔಷಧಿಗಳನ್ನು ಮಾತ್ರ ಬಳಸಲಾಗುತ್ತಿದೆ.

ತೆಂಗಿನ ಕಪ್ಪು ತಲೆ ಹುಳುಗಳ ನಿಯಂತ್ರಣೆಗಾಗಿ ಇಲಾಖಾ ಪ್ರಯೋಗ ಶಾಲೆಗಳಲ್ಲಿ ಪರೋಪ ಜೀವಿಗಳನ್ನು ಉತ್ಪಾದಿಸಿ ಕೀಟ ಬಾಧಿತ ತೋಟಗಳಿಗೆ ಉಚಿತವಾಗಿ ಬಿಡುಗಡೆ ಮಾಡಲಾಗುತ್ತಿದೆ ಹಾಗೂ ಔಷಧಿಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ.

ಆ) ಮೇಲೆ ವಿವರಿಸಿದಂತೆ

ಇ) ನುಸಿ ನಿರ್ವಹಣೆಗಾಗಿ ರೂ. 92.87 ಲಕ್ಷಗಳನ್ನು ಹಾಗೂ ಕಪ್ಪು ತಲೆ ಹುಳುಗಳ ನಿರ್ವಹಣೆಗಾಗಿ ರೂ 41.20 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಶ್ರೀ ಸಿ. ಗುರುಸ್ವಾಮಿ : ಮಾನ್ಯ ಸಭಾಧ್ಯಕ್ಷರೆ, ತಮಗೆ ಅನೇಕ ಧನ್ಯವಾದಗಳು, ಏಕೆಂದರೆ ತಾವು ಇವತ್ತು ಲಿಬರಲ್ ಆಗಿ ಇರುವುದರಿಂದ ಬಹುಶಃ ಇದಕ್ಕೆ ಹೆಚ್ಚಿನ ಸಮಯ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇವತ್ತು ಏನಾಗಿದೆ ಎಂದರೆ ಈ ತೆಂಗಿನ ಮರಕ್ಕೆ ನುಸಿ ಮತ್ತು ಕಪ್ಪು ತಲೆ ಹುಳುವಿನ ಬಾಧೆ ಈ ರಾಜ್ಯದಲ್ಲಿ ಸುಮಾರು ವರ್ಷಗಳ ಕಾಲದಿಂದ ಬಂದಿರತಕ್ಕದ್ದು ತಮಗೆ ಗೊತ್ತಿದೆ. ಅದರಲ್ಲೂ ಕಳೆದ ಐದು ವರ್ಷಗಳಿಂದ ಬಹಳ ತೊಂದರೆಯಾಗಿ ರೈತರು ಮತ್ತು ರಾಜ್ಯದ ಆರ್ಥಿಕ ಪರಿಸ್ಥಿತಿ ಮೇಲೆ ಬಹಳಷ್ಟು ಪರಿಣಾಮವನ್ನು ಬೀರಿರತಕ್ಕದ್ದು. ಈ ತೆಂಗಿನ ಸಂತತಿಯೇ ಹಾಳಾಗುವಂತಹ ಪರಿಸ್ಥಿತಿ ಬಂದಿರತಕ್ಕಂಥದನ್ನು ನಾವೆಲ್ಲಾ ಗಮನಿಸಿದ್ದೇವೆ. ಈಗಾಗಲೇ ನಾನು ಅವರನ್ನು ಕೇಳಿರತಕ್ಕಂಥ ಪ್ರಶ್ನೆ, ಏನು ನುಸಿ ರೋಗ ಮತ್ತು ಕಪ್ಪು ತಲೆ ಹುಳುವಿನಿಂದ ರೋಗ ತೆಂಗಿನ ಮರಕ್ಕೆ ಬರುತ್ತದೆ ಇದನ್ನು ನಿವಾರಣೆ ಮಾಡತಕ್ಕಂಥ ಕಾರ್ಯಕ್ರಮ ಏನು ಇದೆ? ರಾಜ್ಯದಲ್ಲಿ ಹಿಂದೆ ಇದ್ದಂತಹ

ಪದ್ಧತಿಗಳನ್ನು, ಔಷಧಿಗಳನ್ನು ಬದಲಾವಣೆ ಮಾಡಿದ್ದೀರಾ? ಬದಲಾವಣೆ ಮಾಡಿದ್ದರೆ ಏನು ಮಾಡಿದ್ದೀರಿ? ಮತ್ತು ಕಳೆದ ವರ್ಷದಲ್ಲಿ ಈ ಒಂದು ಕಾರ್ಯಕ್ರಮಕ್ಕೆ ಎಷ್ಟು ಹಣವನ್ನು ರಾಜ್ಯ ಸರ್ಕಾರದಿಂದ ಖರ್ಚು ಮಾಡಿದ್ದೀರಿ ಎನ್ನತಕ್ಕ ಮಾತನ್ನು ನಾನು ಕೇಳಿದ್ದೇನೆ. ನನ್ನ ಪ್ರಶ್ನೆಗೆ ಅವರೇನು ಉತ್ತರವನ್ನು ಕೊಟ್ಟಿದ್ದಾರೆ ಅಂದರೆ ಮಾನ್ಯ ಅಧ್ಯಕ್ಷರೆ ತಾವು ದಯಮಾಡಿ ಅದನ್ನು ಗಮನಿಸಬೇಕು. 100 ಬ್ಲಾಕ್ ಪ್ರಾತ್ಯಕ್ಷತೆ ಹಾಗೂ 650 ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರಂತೆ. ಆದರಲ್ಲೂ ಇದುವರೆಗೂ ಜಾರಿಗೆ ಕೊಟ್ಟಿರತಕ್ಕದ್ದು 12 ಬ್ಲಾಕ್ ಪ್ರಾತ್ಯಕ್ಷತೆಗಳು ಹಾಗೂ 24 ತರಬೇತಿ ಕಾರ್ಯಕ್ರಮಗಳು ಅಷ್ಟೇ. ಔಷಧಿ ಕೊಟ್ಟಿದ್ದರೆ, ಯಾವ ಔಷಧಿ ತಾವು ಕೊಟ್ಟಿದ್ದೀರಿ ಎನ್ನತಕ್ಕದ್ದನ್ನು ಹೇಳಬೇಕು. ಮತ್ತೆ ಹಣ ಏನು ತಾವು 1 ಕೋಟಿ 35 ಲಕ್ಷ ರೂಪಾಯಿಗಳನ್ನು ಕಳೆದ ವರ್ಷ ಖರ್ಚು ಮಾಡಿದ್ದೇವೆಂದು ಹೇಳುತ್ತಿದ್ದೀರಲ್ಲ, ಒಟ್ಟು ರಾಜ್ಯದಲ್ಲಿ ಇರತಕ್ಕಂಥ ಈ ಖಾಯಿಲೆಗಳಿಗೆ ಎಷ್ಟು ಔಷಧಿಯ ಅವಶ್ಯಕತೆ ಇತ್ತು? ಎಷ್ಟು ಹಣಕಾಸಿನ ಅವಶ್ಯಕತೆ ಇತ್ತು? ತಾವು ಖರ್ಚು ಮಾಡಿರತಕ್ಕದ್ದು ಎಷ್ಟು ಎಂದು ಹೇಳಿ ಈ ಸದನಕ್ಕೆ ತಿಳಿಸಬೇಕು ಎಂದು ನನ್ನ ಪ್ರಶ್ನೆ.

ಅಧ್ಯಕ್ಷರು : ಅವರು ಉತ್ತರ ಹೇಳಲಿ, ಆ ನಂತರ ತಾವು ಕೇಳಿ. ಒಂದೇ ಸಲ 5 ಪ್ರಶ್ನೆ ಕೇಳಿದರೆ ಅವರು ಹೇಗೆ ಉತ್ತರ ಕೊಡುತ್ತಾರೆ?

ಶ್ರೀ ಎಂ. ಶಿವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದಂತಹ ಗುರುಸ್ವಾಮಿಯವರು ಏನು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಸ್ಪಷ್ಟವಾದಂತಹ ಉತ್ತರವನ್ನು ಕೊಟ್ಟಿದ್ದೇವೆ ಅವರು ಈ ನುಸಿ ರೋಗ ನಿಯಂತ್ರಣ ಮಾಡಲಿಕ್ಕೆ ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದೀರಿ ಎಂದು ಕೇಳಿದ್ದಾರೆ. ನಾವು ರಾಜ್ಯದಲ್ಲಿ 100 ಪ್ರಾತ್ಯಕ್ಷತೆಗಳನ್ನು ಅಂದರೆ ಸುಮಾರು 50 ಎಕರೆ ಪ್ರದೇಶ ಇರತಕ್ಕ ಭೂಮಿಯಲ್ಲಿ 3 ಸಾವಿರ ತೆಂಗಿನ ಗಿಡಗಳನ್ನು ಹೊಂದಿರತಕ್ಕಂಥ ಒಂದು ಪ್ರದೇಶವನ್ನು ಆಯ್ಕೆ ಮಾಡಿಕೊಂಡು ಆ ಪ್ರದೇಶದಲ್ಲಿ ನಾವು ಒಂದು ಡೆಮಾನೆಸ್ಟ್ರೇಷನ್ ಮಾಡಬೇಕೆಂದು ಹೇಳಿ ಸರ್ಕಾರ ಉದ್ದೇಶ ಇಟ್ಟುಕೊಂಡು ಮಾಡುತ್ತಿದ್ದೇವೆ. ಹಿಂದೆ ನುಸಿ ರೋಗ ನಿಯಂತ್ರಣ ಮಾಡಲಿಕ್ಕೆ ಆಗಲಿಲ್ಲ. ಏಕೆ ಎನ್ನತಕ್ಕ ಪ್ರಶ್ನೆಯನ್ನೂ ಕೂಡ ಅವರು ಮಾಡಿದ್ದಾರೆ. ಈ ನುಸಿರೋಗ ನಿಯಂತ್ರಣಕ್ಕೆ ಬಂದಿಲ್ಲ. ನಾವು ರಾಸಾಯನಿಕ ವಸ್ತುಗಳನ್ನು ಉಪಯೋಗಿಸುತ್ತಿದ್ದೆವು. ರಾಸಾಯನಿಕ ಔಷಧಿಗಳನ್ನು ಕೊಡುತ್ತಿದ್ದಂತಹ ಸಂದರ್ಭದಲ್ಲಿ ಅದರಿಂದ ರೋಗ ನಿಯಂತ್ರಣಕ್ಕೆ ಬರಲಿಲ್ಲ ಎನ್ನತಕ್ಕ ಉದ್ದೇಶದಿಂದ ಈಗ ಜೈವಿಕ ಕೀಟನಾಶಕಗಳನ್ನು ತೆಗೆದುಕೊಳ್ಳಬೇಕೆಂಬ ದೃಷ್ಟಿಯಿಂದ ಈಗ ತೆಗೆದುಕೊಂಡಿದ್ದೇವೆ. ಇದಕ್ಕೆ ಎಷ್ಟು ಹಣ ಖರ್ಚು ಮಾಡಿದ್ದೀರಿ? ಹೇಗೆ ಮಾಡಿದ್ದೀರಿ ಎನ್ನತಕ್ಕದ್ದನ್ನು ಅವರು ಪ್ರಶ್ನೆ ಮಾಡಿದ್ದಾರೆ. ಅದಕ್ಕೆ ಪ್ರತ್ಯೇಕವಾಗಿ ತಾವು ಕಳಿಸಿಕೊಡಿ, ನಾನು ತಮಗೆ ಉತ್ತರಗಳನ್ನು ಕಳುಹಿಸಿಕೊಡುತ್ತೇನೆ. ಈಗಾಗಲೇ ಈ ನುಸಿರೋಗ ನಿಯಂತ್ರಣ ಮಾಡುವ ಬಗ್ಗೆ ಸಾಕಷ್ಟು ಚರ್ಚೆ ಈ ಸದನದಲ್ಲಿ ಆಗಿದೆ. ಸುಮಾರು 7–8 ಕೋಟಿ ತೆಂಗಿನಮರಗಳಲ್ಲಿ ಸುಮಾರು 4 ಕೋಟಿ 27 ಲಕ್ಷಕ್ಕೆ ಈ ನುಸಿರೋಗ ಬಂದಿದೆ. ಈ ನುಸಿರೋಗ ಕೇವಲ ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತವಾಗಿಲ್ಲ. ಕೇರಳ, ತಮಿಳುನಾಡು, ಆಂಧ್ರ ಪ್ರದೇಶ ಈ ಭಾಗದಲ್ಲಿ ಕೂಡ ಇದೆ. ಇದನ್ನು ನಿಯಂತ್ರಣ ಮಾಡಲಿಕ್ಕೆ ಸರ್ಕಾರ ಏನೆಲ್ಲಾ ಪ್ರಯತ್ನ ಮಾಡಿದೆ. ಕಳೆದ ಮೂರು ಮೂರುವರೆ ವರ್ಷದಿಂದ ಎಷ್ಟು ಪ್ರಯತ್ನ ಮಾಡಿದ್ದೇವೆ ಎನ್ನತಕ್ಕ ವಿಚಾರದ ಬಗ್ಗೆ ಸದನಕ್ಕೆ ಅನೇಕ ಸಾರಿ ಹೇಳಿದ್ದೇವೆ. ಈಗ ಏನೆಲ್ಲಾ ಮಾಡಿದರೂ ಕೂಡ ನಿಯಂತ್ರಣ ಬರಲಿಕ್ಕೆ ಸಾಧ್ಯತೆ ಆಗಲಿಲ್ಲ ಎಂದ ಮೇಲೆ ಈಗ ಪ್ರಾತ್ಯಕ್ಷತೆಗಳನ್ನು ತೆಗೆದುಕೊಳ್ಳುವ ಮೂಲಕವಾಗಿ ನಾವೀಗ

ರೈತರಿಗೆ ತಿಳುವಳಿಕೆ ಕೊಡುತ್ತಿದ್ದೇವೆ. ತಿಳುವಳಿಕೆ ಎಂದರೆ ಜೈವಿಕ ಕೀಟನಾಶಕಗಳನ್ನು ಬಳಕೆ ಮಾಡಿಕೊಂಡು ಯಾವ ರೀತಿಯಾಗಿ ಗಿಡಗಳನ್ನು ನಿರ್ವಹಣೆ ಮಾಡಬೇಕು ಎನ್ನತಕ್ಕಂಥ ಒಂದು ಅರಿವು ಮೂಡಿಸತಕ್ಕಂಥಹ ಕಾರ್ಯಕ್ರಮ. ಅಲ್ಲೇ ತರಬೇತಿ ನೀಡತಕ್ಕಂಥ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡು ಮಾಡುತ್ತಿರುವುದು. ಇನ್ನು ಬೇರೆ ಏನಾದರೂ ವಿಚಾರ ಇದ್ದರೆ ತಾವು ಕೇಳಿ.

ಶ್ರೀ ಸಿ. ಗುರುಸ್ವಾಮಿ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಏನು ಉತ್ತರವನ್ನು ಕೊಟ್ಟರು? ಇವರ ಉತ್ತರದಲ್ಲಿ ಏನೂ ಇಲ್ಲ. ಏಕೆ ಎಂದು ಹೇಳಿದರೆ ಇವತ್ತು ಎರಡು ಪ್ರಾಬ್ಲಮ್ಸ್ ಇದೆ. ಒಂದು ನುಸಿರೋಗ ತೆಂಗಿನ ಕಾಯಿಗೆ ಬರತಕ್ಕದ್ದು, ಕಪ್ಪು ತಲೆ ಹುಳುಗಳು ಆ ತೆಂಗಿನ ಸಸಿಗಳನ್ನೇ ಹಾಳು ಮಾಡತಕ್ಕಂಥದ್ದು, ಗರಿಗಳಿಗೆ ಬಂದ ಹಾಳು ಮಾಡತಕ್ಕಂಥದು ಇದೆ. ಆದ್ದರಿಂದ ಯಾವುದಕ್ಕೆ ಯಾವ ಔಷಧಿಯನ್ನು ಹೊಡೆಯುತ್ತಿದ್ದಾರೆ ಎನ್ನತಕ್ಕ ವಿಚಾರ ಇಲ್ಲ. ಕೀಟ ನಾಶಕ ಕೊಡತಕ್ಕಂಥಹದು ಈ ಗರಿಗಳಿಗೆ ಬಂದಿರತಕ್ಕ ಕಪ್ಪು ತಲೆ ಹುಳವನ್ನು ನಾಶ ಮಾಡತಕ್ಕ ವಿಚಾರದಲ್ಲಿ . ಅದಕ್ಕೂ ಕೂಡ ಸಾಕಷ್ಟು ಚಿಕಿತ್ಸೆ ಕೊಡತಕ್ಕಂಥ ವ್ಯವಸ್ಥೆ ಆಗಿಲ್ಲ. ನುಸಿ ರೋಗಕ್ಕೆ ಯಾವ ರೀತಿ ಮಾಡಿದ್ದೀರಿ? ನಮ್ಮ ಮಾನ್ಯ ಕಾಗೋಡು ತಿಮ್ಮಪ್ಪನವರ ಅಧ್ಯಕ್ಷತೆಯಲ್ಲಿ ಇದರ ವಿಚಾರದಲ್ಲಿ ಒಂದು ಸದನ ಸಮಿತಿ ಆಗಿತ್ತು ಆ ಸದನ ಸಮಿತಿಯ ಶಿಫಾರಸ್ಸುಗಳು ಏನು? ದಯಮಾಡಿ ಇದರ ಬಗ್ಗೆ ಸರ್ಕಾರ ಗಂಭೀರವಾಗಿ ವಿಚಾರ ಮಾಡಬೇಕು ಎನ್ನತಕ್ಕದ್ದು ನನ್ನ ಮನವಿ. ಮಾನ್ಯ ಸಚಿವರು ಸ್ಪಷ್ಟವಾದಂತಹ ಉತ್ತರ ಹೇಳಬೇಕು. ನಾನು ಎಷ್ಟು ಹಣ ಖರ್ಚು ಮಾಡಿದ್ದೀರಿ ಎಂದು ಸ್ಪೆಸಿಫಿಕ್ ಆಗಿ ಕೇಳಿದ್ದೇನೆ. ಕಳೆದ ವರ್ಷ ಈ ದಿಕ್ಕಿನಲ್ಲಿ ಎಷ್ಟು ಖರ್ಚು ಮಾಡಿದ್ದೀರಿ ಎಂದು ನಾನು ಕೇಳಿದ್ದೇನೆ. ಅದಕ್ಕಾಗಿ ಹೊಸದಾಗಿ ನಾನು ಪ್ರಶ್ನೆ ಕೇಳಬೇಕಾದಂತಹ ಅವಶ್ಯಕತೆ ಇಲ್ಲ. ದಯಮಾಡಿ ಇದರ ಬಗ್ಗೆ ಕಾಳಜಿ ವಹಿಸಬೇಕು ಎಂದು ಹೇಳುತ್ತಿದ್ದೇನೆ.

ಶ್ರೀ ಎಂ. ಶಿವಣ್ಣ : ಮಾನ್ಯ ಗುರುಸ್ವಾಮಿಯವರ ಪ್ರಶ್ನೆಗೆ ಉತ್ತರ ಹೇಳಿ ಬಿಡುತ್ತೇನೆ. ಆ ನಂತರ ಬೇರೆಯವರು ಕೇಳಲಿ. ರಾಜ್ಯದಲ್ಲಿ ಅತ್ಯಂತ ತೀವ್ರತರವಾಗಿ ಕಾಡಿದಂತಹ ಪ್ರಶ್ನೆ ಅಂದರೆ ಈ ನುಸಿ ರೋಗದ್ದು. ಇದನ್ನು ನಾವು ಹಿಂದೆ ನಮ್ಮ ಕೋಕನಟ್ ಬೋರ್ಡಿನಿಂದ ಸುಮಾರು 11.50 ಕೋಟಿ ರೂಪಾಯಿಗಳು ಬಂದಿತ್ತು. ಆ ಹಣದಲ್ಲಿ ನಾವು ಸಾಕಷ್ಟು ನಿಯಂತ್ರಣ ಕೈಗೊಳ್ಳುವುದಕ್ಕೆ ನಾವಾಗಿ ಸರ್ಕಾರವೇ ಕೈಗೊಳ್ಳಲಿಲ್ಲ. ಯೂನಿವರ್ಸಿಟಿ ತಜ್ಞರನ್ನು, ಸೈಂಟಿಸ್ಟ್‌ಗಳನ್ನು ಕರೆಸಿ ಅವರು ಯಾವ ಔಷಧಿ ಕೊಡಬೇಕೆಂದು ಹೇಳುತ್ತಾರೆ? ಆ ಔಷಧಿಯನ್ನು ನಾವು ಆಯ್ಕೆ ಮಾಡಿಕೊಂಡು ಅದರ ಜೊತೆಗೆ ಇದರ ವಿಚಾರದಲ್ಲಿ ರಾಷ್ಟ್ರ ಮಟ್ಟದಲ್ಲಿ ಒಂದು ಸ್ಟೀರಿಂಗ್ ಕಮಿಟಿ ಇದೆ. ಆ ಕಮಿಟಿಯವರೂ ಕೂಡ ನಾಲ್ಕೈದು ಬಾರಿ ಸಭೆಗಳನ್ನು ಮಾಡಿದ್ದಾರೆ. ಆ ಸಭೆಗಳಲ್ಲಿ ಇಂತಹ ಔಷಧಿಯನ್ನೇ ಕೊಡಬೇಕೆಂದು ತೀರ್ಮಾನ ಮಾಡಿ ಆದ ಮೇಲೆ ನಾನು ಮನೋಕ್ರೋಟಪಾಸ್‌ಅನ್ನು ಕೊಡತಕ್ಕ ವ್ಯವಸ್ಥೆ ಆಯಿತು. ಮಾನ್ಯ ಗುರುಸ್ವಾಮಿಯವರು ಪ್ರಸ್ತಾಪ ಮಾಡಿದ ಹಾಗೆ ಕಾಗೋಡು ತಿಮ್ಮಪ್ಪನವರು ತೋಟಗಾರಿಕಾ ಇಲಾಖೆಯನ್ನು ಹೊಂದಿದ್ದಂತಹ ಸಂದರ್ಭದಲ್ಲಿ ಅದನ್ನು ಇಡೀ ರಾಜ್ಯದಲ್ಲಿ ಒಂದು ರೀತಿ ಸಮರೋಪಾದಿಯಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡು ಈ ಸುಸಿ ರೋಗವನ್ನು ನಿಯಂತ್ರಣಕ್ಕೆ ತರಬೇಕು ಎನ್ನುವಂತಹ ಕಾರ್ಯಕ್ರಮವನ್ನು ಮಾಡಿದರು. ಅಂತಹ ಒಂದು ಸಂದರ್ಭದಲ್ಲಿ ಈ ಸದನದಲ್ಲೇ ಚರ್ಚೆ ಆಗಿ ಇದು ತುಂಬಾ ಹಾನಿಕಾರಕ ಆಗಿದೆ– ಎನ್ನತಕ್ಕ ಒಂದು ಅಭಿಪ್ರಾಯ ಪಟ್ಟ ಮೇಲೆ ಅದನ್ನು ನಾವು ಸ್ಥಗಿತಗೊಳಿಸಿ, ಇಂತಹ ಔಷಧಿಯನ್ನೇ ಕೊಡತಕ್ಕದ್ದು

ಬೇಡ ಎಂದು ಹೇಳಿ ಈ ಜೈವಿಕ ತಂತ್ರಜ್ಞಾನದ ಔಷಧಿಗಳನ್ನು ನಾವು ಕೊಡಬೇಕೆಂದು ಹೇಳಿ ತೀರ್ಮಾನ ತೆಗೆದುಕೊಂಡು ಈಗ 100 ಪ್ರಾತ್ಯಕ್ಷತೆ ತೆಗೆದುಕೊಂಡಿದ್ದೇವೆ. ಈಗ ಪ್ರಾರಂಭಿಕವಾಗಿ 12 ಪ್ರಾತ್ಯಕ್ಷತೆಗಳನ್ನು ಈಗಾಗಲೇ 12 ಕಡೆ ಪ್ರಾರಂಭ ಮಾಡಿದ್ದೇವೆ. ಪ್ರಾರಂಭ ಮಾಡತಕ್ಕಂಥ ಸಂದರ್ಭದಲ್ಲಿ ನಾವು ಸೂಚನೆ ಕೊಟ್ಟಿದ್ದೇವೆ. ಆಯಾಯ ಭಾಗದ ಜನಪ್ರತಿನಿಧಿಗಳನ್ನೂ ಕೂಡ ಕರೆದುಕೊಂಡು ಅವರಿಗೂ ಕೂಡ ಇದರ ವಿಚಾರದಲ್ಲಿ ಮನದಟ್ಟು ಮಾಡಿಕೊಟ್ಟು ಅಲ್ಲಿ ರೈತರಿಗೆ ಅರಿವು ಉಂಟಾಗಬೇಕೆಂದು ಸೂಚಿಸಿದ್ದೇವೆ. ಅಂದರೆ ಎಲ್ಲರಿಗೂ ಒಂದೇ ಕಡೆ ಅರಿವು ಉಂಟು ಮಾಡಲು ಆಗುವುದಿಲ್ಲ. ಎಲ್ಲಿ ನಾವು ಪ್ರಾತ್ಯಕ್ಷತೆಗಳನ್ನು ತೆಗೆದುಕೊಳ್ಳುತ್ತೇವೆ ಆ ಭಾಗದ ರೈತರನ್ನು ಕರೆದು ಅಲ್ಲಿ ಅವರಿಗೆ ಅರಿವು ಮೂಡಿಸಿ ಈ ತೆಂಗಿನ ಗಿಡಗಳನ್ನು ಯಾವ ರೀತಿ ನಿರ್ವಹಣೆ ಮಾಡಿಕೊಳ್ಳಬೇಕು ಎನ್ನತಕ್ಕಂಥ ಒಂದು ತರಬೇತಿಯನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ಈಗ ಹಾಕಿಕೊಂಡು ಮಾಡುತ್ತಿದ್ದೇವೆ. ಅವದನ್ನು ನಾವು ನಿಯಂತ್ರಣ ಮಾಡಬೇಕು ಎಂದು ಹೇಳಿ ಎಷ್ಟೇ ಪ್ರಯತ್ನಪಟ್ಟರೂ ಕೂಡ ಇದು ಒಂದು ನಿಯಂತ್ರಣ ಮಾಡಲಿಕ್ಕೆ ಸಾಧ್ಯವಾಗದಂತಹದು. ಹೆಚ್ಚಿನ ತೇವಾಂಶ ಇದ್ದರೆ ಅದು ಕಡಿಮೆ ಆಗತಕ್ಕದ್ದು ಆಗುತ್ತದೆ. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಅದು ದಿನೇ ದಿನೇ ಹೆಚ್ಚತಕ್ಕಂಥ ಒಂದು ಸಂದರ್ಭವನ್ನೂ ಕೂಡ ನಾವು ಕಾಣುತ್ತಿದ್ದೇವೆ. ಹಾಗಾಗಿ ಸರ್ಕಾರ ಕೈಕಟ್ಟಿ ಕುಳಿತಿಲ್ಲ. ಏನೆಲ್ಲಾ ಕಾರ್ಯಕ್ರಮವನ್ನೂ ಕೂಡ ಹಾಕಿಕೊಂಡು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಒಂದು ಗಾದೆ ಇದೆ. ತೆಂಗು ತೇಲಿಸಿ ಹೂಳಬೇಕು. ಬಾಳೆ ಬಗಿದು ಹೂಳಬೇಕು ಎಂದು ಗಾದೆ ಇದೆ. ಆ ತೆಂಗನ್ನು ಹೇಗೆ ತೇಲಿಸಿ ಹೂಳುತ್ತಾರೋ, ಇವರ ಉತ್ತರ ಕೂಡ ತೇಲಿಸುವ ರೀತಿಯಲ್ಲಿ ಕೊಟ್ಟಿದ್ದಾರೆ. ನಾನು ಏಕೆ ಹೀಗೆ ಹೇಳುತ್ತೇನೆ ಎಂದರೆ ಇವರ ಜೈವಿಕ ಕೀಟನಾಶಕ ಇತ್ಯಾದಿ ಬಳಕೆಯನ್ನು ನನ್ನ ತೋಟದಲ್ಲಿ 8–9 ತಿಂಗಳಿಂದ ಮಾಡಿಕೊಂಡು ಬಂದಿದ್ದೇನೆ. ಒಂದು ಪೈಸೆಯಷ್ಟು ಕೂಡ ನುಸಿರೋಗ ಇಳಿದಿಲ್ಲ. ನಿಮ್ಮ ಮನೋಕೋಟೋ ಪಾಸ್ ಎಂಡೋಸಲ್ಫಾನ್ ಎಲ್ಲಾ ಪ್ರಯತ್ನಗಳನ್ನು ಮಾಡಿದ್ದಾದ ಮೇಲೆ ನಿಮ್ಮ ಜೈವಿಕ ಕೀಟನಾಶಕವನ್ನು 8 ತಿಂಗಳಿಂದ ಸತತವಾಗಿ ನನ್ನ ತೋಟದಲ್ಲಿ ನಾನು ಮಾಡಿಸುತ್ತಿದ್ದೇನೆ.

11.40 ಪಿ.ಎಂ.

ಇದರ ರಿಸಲ್ಟ್ ಜೀರೋ. ನಿಮಗೆ ಇಚ್ಛಾಶಕ್ತಿ ಇಲ್ಲ. ಕೋಕನಟ್ ಬೋರ್ಡ್‌ನವರನ್ನು ಕರೆಸಿ ಅವರಿಂದ ಯಾವ ರೀತಿ ಪ್ರಾತ್ಯಕ್ಷಿಕೆ ಮಾಡಿಸಬೇಕೆನ್ನುವಂಥ ಹಠಮಾರಿತನ ನಿಮ್ಮಲ್ಲಿಲ್ಲ. ನಿಮ್ಮಲ್ಲಿರುವುದೇನೆಂದರೆ, ವಿಧಾನಸಭೆಯಲ್ಲಿ ಇದಕ್ಕೆ ಒಂದು ಉತ್ತರ ಕೊಡಬೇಕು. ಉತ್ತರ ಕೊಟ್ಟ ನಂತರ ಅದು ತೇಲಿಕೆ ಉತ್ತರ ಆಗುತ್ತದೆಯೇ ವಿನಾ ನುಸಿರೋಗ ಬಂದಿರುವುದಕ್ಕೆ ಏನೂ ಪ್ರಯೋಜವಾಗುವುದಿಲ್ಲ. ಜೈವಿಕ ವಿಧಾನದಿಂದ ಮೂರು ಕಾಸಿನಷ್ಟೂ ಉಪಯೋಗವಾಗಿಲ್ಲ. ಆದುದರಿಂದ ಇನ್ನು ಏನಾದರೂ ಮಾಡುವುದಕ್ಕೆ ಸರ್ಕಾರ ಗಮನಹರಿಸಿದೆಯೇ? ದಯಮಾಡಿ ಹೇಳಬೇಕು.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಸದಸ್ಯರಾದ ಗುರುಸ್ವಾಮಿಯವರು ಪ್ರಶ್ನೆಯನ್ನು ಸ್ಪಷ್ಟವಾಗಿ ಕೇಳಿದ್ದಾರೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ನೀಡುತ್ತಾ ಪ್ರತ್ಯಕ್ಷಿಕೆ ಬಗ್ಗೆ ತಿಳಿಸಿದ್ದಾರೆ. ಪ್ರಾತ್ಯಕ್ಷಿಕೆ ಎಂದರೇನು? ಇದರಿಂದ ನುಸಿರೋಗವಾಗಲಿ, ಕೀಟಾಣುವಾಗಲಿ ನಾಶವಾಗಲು ಸಾಧ್ಯವಿಲ್ಲ. ಇಲ್ಲವೇ ಪ್ರಾತ್ಯಕ್ಷಿಕೆಯಿಂದ ತೆಂಗಿನ ಗರಿ ತಿನ್ನುವ ಕಂಬಳಿ ಹುಳುಗಳು ನಾಶವಾಗುವುದು ಸಾಧ್ಯವಿಲ್ಲವಾದ ಕಾರಣ ನಾನು ಕಳೆದ ಸಾರಿ ಕಾಗೋಡುತಿಮ್ಮಪ್ಪನವರು ತೋಟಗಾರಿಕೆ ಸಚಿವರಾಗಿದ ಸಂದರ್ಭದಲ್ಲಿ

ಇದನ್ನೂ ರಾಜ್ಯ ಸರ್ಕಾರದಿಂದ ನಿಯಂತ್ರಣ ಮಾಡುವುದಕ್ಕಾಗುವುದಿಲ್ಲ– ಏನು ತೆಂಗು ಬೆಳೆಯುವ ಕೋಲಾರ, ತುಮಕೂರು, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳನ್ನು ಎಂಡೋಮಿಕ್ ಏರಿಯಾ ಆಗಿ ಡಿಕ್ಲೇರ್ ಮಾಡುವ ಬಗ್ಗೆ ಕೇಂದ್ರ ಸರ್ಕಾರದಿಂದ ಘೋಷಣೆ ಮಾಡಿಸಿ, ಕೇಂದ್ರದಿಂದ ಅನುದಾನ ಪಡೆದುಕೊಂಡು ಈ ರೋಗವನ್ನು ನಿವಾರಣೆ ಮಾಡಬೇಕು. ಪ್ರಾತ್ಯಕ್ಷಿಕೆ ಮಾಡುವುದರಿಂದ ರೋಗ ನಿವಾರಣೆ ಮಾಡಲು ಸಾಧ್ಯವಿಲ್ಲ. ಹುತ್ತುವ ಬಡಿದೊಡೆ ಹಾವು ಸಾಯಬಲ್ಲದೆ, ಹುತ್ತವ ಬಗೆದು ಹಾವನ್ನು ಪಿಡಿದು ತಲೆಯನ್ನು ಜಜ್ಜಬೇಕು. ಮಾನ್ಯ ಸಚಿವರಾದ ಶಿವಣ್ಣನವರು ಹೇಳುತ್ತಿರುವುದನ್ನು ನೋಡಿದರೆ ಬರೀ ಪ್ರಾತ್ಯಕ್ಷಿಕೆ ಮಾಡುವ ಮೂಲಕ ಹುತ್ತುವ ಬಡಿದೊಡೆ ಹಾವು ಸಾಯುವುದಿಲ್ಲ. ಆದುದರಿಂದ, ಮಾನ್ಯ ಸಚಿವರು ಎಂಡೋಮಿಕ್ ಏರಿಯಾ ಆಗಿ ಸೇರಿಸುತ್ತೇವೆ ಎನ್ನುವುದನ್ನು ಈ ಸದನದಲ್ಲಿ ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಕೃಷ್ಣಪ್ಪ : ಒಂದು ಕಾಲದಲ್ಲಿ ಕೆಲವು ತಾಲ್ಲೂಕುಗಳಲ್ಲಿ ಎರಡು ಸಾವಿರದಷ್ಟು ಮರಗಳನ್ನು ಆಯ್ದುಕೊಂಡು ಮೂರು ಕೆ.ಜಿ.ಗಳಷ್ಟು ಬೇವಿನ ಹಿಂಡಿ ಕೊಡಬೇಕೆಂದು ಕ್ರಮ ತೆಗೆದುಕೊಂಡಿದ್ದರು. ಮಂತ್ರಿಗಳು ಅದರ ಬಗ್ಗೆ ಹೇಳಲಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ನಮ್ಮ ಬಳಿ ಬಂದು ತಾಲ್ಲೂಕಿನ ಕೆಲವು ಕಡೆಗಳಲ್ಲಿ ಎಕ್ಸ್‌ಪೆರಿಮೆಂಟ್ ಮಾಡಿ ಮೂತು ಕೆ.ಜಿ.ಗಳಷ್ಟು ಬೇವಿನ ಹಿಂಡಿ ಹಾಕುವ ಮೂಲಕ ಒಂದು ಮರಕ್ಕೆ ತೊಂಭತ್ತು ರೂಪಾಯಿಗಳಂತೆ ಖರ್ಚು ಮಾಡುವುದಾಗಿ ತಿಳಿಸಿದರು. ಅದರ ಬಗ್ಗೆ ಏನು ಮಾಹಿತಿ ಇದೆ? ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿರುವ ತೆಂಗಿನ ಬೆಳೆಗೂ ರೋಗ ಬಂದಿರುವುದರಿಂದ ಉಪ ಪ್ರಶ್ನೆ ಕೇಳುವುದಕ್ಕೆ ನಮಗೂ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಕರಡಿ ಸಂಗಣ್ಣನವರು ಕೇಳಿದ ನಂತರ ತಾವು ಕೇಳಬಹುದು.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೆ, ನುಸಿರೋಗ ಮತ್ತು ಕಪ್ಪು ತಲೆ ಹುಳು ರೋಗ ನಿಯಂತ್ರಣಕ್ಕೆ ಮಾನ್ಯ ಸಚಿವರು ಈಗ ತಾನೇ ನೀಡಿರುವ ಹೇಳಿಕೆಯಲ್ಲಿ ಏನು ತಿಳಿಸಿದ್ದಾರೆಂದರೆ, ಜೈವಿಕ ವಿಧಾನದಿಂದ ಔಷಧಿಯನ್ನು ಸಿಂಪರಣೆ ಮಾಡಿದರೂ ಕೂಡ ರೋಗ ನಿಯಂತ್ರಣವಾಗುತ್ತಿಲ್ಲವೆಂದರು. moisture content ಅನ್ನು ಉಳಿಸಿಕೊಳ್ಳುವುದಕ್ಕೆ ಸರ್ಕಾರದವರು ಏನು ಆಲೋಚನೆ ಮಾಡಿದ್ದೀರಿ? ಯಾವ ದಿಕ್ಕಿನಲ್ಲಿ ಆಲೋಚನೆ ಮಾಡಿದರೆ moisture content ಉಳಿಸಿಕೊಳ್ಳಲು ಸಾಧ್ಯವಿದೆ? ಎಂಬುದನ್ನು ಆಲೋಚನೆ ಮಾಡಿದ್ದೀರಾ? ತಿಳಿಸಬೇಕು.

ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಜಗತ್ತಿನಲ್ಲಿ ಅತಿ ಹೆಚ್ಚು ಪ್ರಮಾಣದಲ್ಲಿ ತೆಂಗು ಬೆಳೆಯುವ ದೇಶಗಳೆಂದರೆ, ಇಂಡೋನೇಷಿಯಾ, ಮಲೇಷಿಯಾ, ಫಿಲಿಪ್ಪೈನ್ಸ್‌ನಲ್ಲಿ ಈ ರೋಗಕ್ಕೆ ನ್ಯಾಚುರಲ್ ಆಗಿರುವ ಔಷಧಿ ಕಂಡುಹಿಡಿದಿದ್ದಾರೆಂದು ಅಮೆರಿಕಾದ ಮ್ಯಾಗಝೀನ್‌ನಲ್ಲಿ ಬಂದಿದೆ. ಯುನೈಟೆಡ್ ಸ್ಟೇಟ್ಸ್ ಇನ್‌ಫರ್ಮೇಶನ್ ಸರ್ವೀಸ್‌ನವರು ಒಂದು ಮ್ಯಾಗಝೀನ್ ಕಳುಹಿಸುತ್ತಾರೆ. ಅದರಲ್ಲಿ ಅದನ್ನು ರಿ–ಪ್ರೊಡ್ಯೂಸ್ ಮಾಡಿದ್ದಾರೆ. ದಯಮಾಡಿ ತಮ್ಮ ಮೂಲಕ ಮಾನ್ಯ ಸಚಿವರ ಗಮನ ಸೆಳೆಯುವುದೇನೆಂದರೆ, ಅದನ್ನು ಪತ್ತೆ ಮಾಡಿ ಯಾರನ್ನಾದರೂ ಕಳುಹಿಸಿ ನುಸಿರೋಗ ತಡೆಗಟ್ಟಲು

ಔಷಧಿ ಇಲ್ಲವೆಂದು ನಿಸ್ಸಹಾಯಕರಾಗಿ ಕುಳಿತುಕೊಳ್ಳಬಾರದು. It should be positive ದಯಮಾಡಿ ಆ ದೇಶದಿಂದ ಮ್ಯಾಗಝೀನ್ ತರಿಸಿಕೊಂಡು ರೋಗ ಪತ್ತೆ ಮಾಡುವ ಮೂಲಕ ಔಷಧಿಯನ್ನು ರೋಗ ಬಂದಿರುವ ಕಡೆಗಳಿಗೆ ಕೊಡುವಂಥ ಒಂದು ಪದ್ಧತಿ ತರಬೇಕೆಂದು ತಮ್ಮ ಮೂಲಕ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಮೊದಲು ನುಸಿರೋಗ ಇತ್ತು. ಇದರೊಂದಿಗೆ ಈಗ ಕಪ್ಪು ತಲೆ ಹುಳು ಕೂಡ ತೆಂಗಿನ ಮರಗಳನ್ನು ಕಾಡುತ್ತಿದೆ. ಹಾಗಾಗಿ ಇವೊತ್ತಿನ ದಿವಸ ಎಲ್ಲಾ ಕಡೆಗಳಲ್ಲೂ ತೆಂಗಿನ ಮರಗಳನ್ನು ಕಡಿದು ಹಾಕುವಂತಹ ಪರಿಸ್ಥಿತಿಯನ್ನು ಪ್ರತಿನಿತ್ಯ ಕಾಣುತ್ತಿದ್ದೇವೆ. ರೋಗವನ್ನು ನಿಯಂತ್ರಿಸುವ ದಿಸೆಯಲ್ಲಿ ತರಬೇತಿ ಕೊಟ್ಟು ಪ್ರಾತ್ಯಕ್ಷಿಕೆ ಕಾರ್ಯಕ್ರಮಗಳನ್ನು ಮಾಡುತ್ತೇವೆಂದು ಮಾನ್ಯ ಸಚಿವರು ಏನು ಹೇಳುತ್ತಾರೆ. ಇದಕ್ಕೆ ಕೊನೆ ಇಲ್ಲ. ಏನು ತರಬೇತಿ ನೀಡುತ್ತಿದ್ದಾರೋ ಅದರಿಂದ ವೃಥಾ ಕಾಲಹರಣವಾಗುತ್ತಿದೆಯೇ ಹೊರತು ಅದರ ಪರಿಣಾಮ ತೆಂಗಿನ ಮರಗಳ ಮೇಲಾಗುತ್ತಿಲ್ಲ. ಆದಕಾರನ, ತೆಂಗಿನ ಮರಗಳನ್ನು ಉಳಿಸುವುದಕ್ಕೆ ಒಂದು ವ್ಯವಸ್ಥಿತ ಕಾರ್ಯಕ್ರಮವನ್ನು ತಾವು ಹಮ್ಮಿಕೊಳ್ಳಬೇಕು. ಇದಕ್ಕೆ ಹಿರಿಯ ಸದಸ್ಯರಾದ ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಸದನದಲ್ಲಿ ಇನ್ಸುರೆನ್ಸ್ ಬಗ್ಗೆ ಏನು ಪ್ರಸ್ತಾಪಿಸಿದರೋ ಅದೊಂದೇ ಮಾರ್ಗ ಇದೆಯೇ ಹೊರತು ಕಪ್ಪು ತಲೆ ಹುಳುವಿನ ನಿಯಂತ್ರಣಕ್ಕೆ 41 ಲಕ್ಷ ಖರ್ಚು ಮಾಡಿದ್ದೇವೆ. 92 ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆಂದು ಏನು ಹೇಳುತ್ತಿದ್ದೀರಿ. ಇದೆಲ್ಲವನ್ನೂ ಬಂದ್ ಮಾಡುವ ಮೂಲಕ ನುಸುರೋಗಕ್ಕೆ ತುತ್ತಾಗಿರುವ ತೆಂಗಿನ ಮರಗಳನ್ನು ಪತ್ತೆಹಚ್ಚಿ ಮರಗಳ ವಯಸ್ಸಿನ ಆಧಾರದ ಮೇಲೆ ಅದಕ್ಕೆ ವರ್ಷಕ್ಕೆ ಇಂತಿಷ್ಟು ಪರಿಹಾರ ಎಂದು ನಿಗದಿಪಡಿಸಬೇಕು. ಮಾನ್ಯ ಅಧ್ಯಕ್ಷರೆ, ಮತ್ತೊಂದು ವಿಷಯವೆಂದರೆ, ಇವರ ಇಲಾಖೆಯಲ್ಲಿ ನೌಕರರೇ ಇಲ್ಲ. ಒಬ್ಬ ಅಸಿಸ್ಟೆಂಟ್ ಡೈರೆಕ್ಟರ್ ಅವರನ್ನು ಬಿಟ್ಟರೆ ಕೆಳಹಂತದಲ್ಲಿ ತೋಟಗಳನ್ನು ನೋಡುವುದಕ್ಕೆ ಫೀಲ್ಡ್ ವರ್ಕರ್ಸ್ ಯಾರೂ ಇಲ್ಲ. ಹಾಗಾಗಿ ತೆಂಗಿನ ತೋಟಗಳನ್ನು ಸೂಪರ್‌ವಿಶನ್ ಮಾಡಿ ಪರಿಹಾರ ದೊರಕಿಸಿಕೊಡುವ ವ್ಯವಸ್ಥೆ ಇಲ್ಲದಿರುವುದರಿಂದ ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಬೇಕು.

ಶ್ರೀ ಎಂ. ಶಿವಣ್ಣ : ಮಾನ್ಯ ಅಧ್ಯಕ್ಷರೆ, ತೆಂಗಿನ ಮರಗಳಿಗೆ ಬಂದಿರುವ ರೋಗವನ್ನು ನಿಯಂತ್ರಿಸುವ ದಿಸೆಯಲ್ಲಿ ಇಲಾಖೆಯು ಏನೆಲ್ಲಾ ಪ್ರಯತ್ನಗಳನ್ನು ಮಾಡಿದೆ ಎಂಬುದು ಅವರಿಗೆಲ್ಲಾ ಮನವರಿಕೆಯಾಗಿದೆ. ರೋಗವನ್ನು ನಿಯಂತ್ರಣಕ್ಕೆ ತರಲು ಸಾಧ್ಯವಿಲ್ಲವೆಂಬುದೂ ಅವರಿಗೆ ಮನವರಿಕೆಯಾಗಿದೆ. ರೋಗ ನಿಯಂತ್ರಣಕ್ಕೆ ಎಲ್ಲಾ ಪ್ರಯತ್ನಗಳನ್ನು ಸರ್ಕಾರ ಮಾಡುತ್ತಿದ್ದು, ಇವೊತ್ತು ಪ್ರಾತ್ಯಕ್ಷಿಕೆಗಳನ್ನು ಮಾಡುತ್ತೇವೆಂದು ಹೇಳಿರುವ ಉದ್ದೇಶ ಇಂಟರ್‌ನ್ಯಾಷನಲ್ ಲೆವಲ್‌ನಲ್ಲಿ ಬೆಂಗಳೂರಿನಲ್ಲಿ ಒಂದು ಕಾನ್‌ಫೆರೆನ್ಸ್ ಜರುಗಿತು. ಸದರಿ ಕಾನ್‌ಫೆರೆನ್ಸ್ ಅನ್ನು ಕೋಕನೆಟ್ ಡೆವಲಪ್‌ಮೆಂಟ್ ಬೋರ್ಡ್‌ನವರು ಆರ್ಗನೈಜ್ ಮಾಡಿದ್ದರು. ಅವರಿಂದ ಪ್ರಾತ್ಯಕ್ಷಿಕೆಗಳನ್ನು ನಡೆಸುವ ಮೂಲಕ ಇಡೀ ರಾಜ್ಯದಲ್ಲಿ ತೆಂಗು ಬೆಳೆಯುವ ರೈತರಿಗೆ ತಿಳಿವಳಿಕೆ ನೀಡಿ ಅದರಿಂದ ಅವರಿಗೆ ಸಹಕಾರಿಯಾಗಿ ರೋಗವನ್ನು ನಿಯಂತ್ರಣಕ್ಕೆ ತರುವ ದಿಸೆಯಲ್ಲಿ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಯಾವ್ಯಾವ ಔಷಧಿಗಳನ್ನು ಕೊಟ್ಟು ರೋಗವನ್ನು ಹೇಗೆ ನಿಯಂತ್ರಿಸಬೇಕೆಂಬ ಬಗ್ಗೆ ಇದರಲ್ಲಿ ಎಲ್ಲಾ ವಿವರಗಳಿದ್ದು, ತಮ್ಮ ತಮ್ಮ ಕ್ಷೇತ್ರಗಳಿಗೆ ಔಷಧಿಯನ್ನು ಒದಗಿಸಿಕೊಡಲು ಸಿದ್ಧರಿದ್ದೇವೆ. ಇದನ್ನು

ಉಪಯೋಗಿಸಿಕೊಂಡು ರೋಗವನ್ನು ನಿಯಂತ್ರಿಸುವುದಕ್ಕೆ ಪ್ರಯತ್ನಿಸಬೇಕಾಗಿದೆಯೇ ವಿನಾ ಬೇರೆನೂ ಮಾಡಲು ಸಾಧ್ಯವಿಲ್ಲ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ಸದಸ್ಯರಾದ ಸೋಮಣ್ಣನವರದು. ಅವರ ಪ್ರಶ್ನೆಯನ್ನು ಮತ್ತೊಂದು ದಿವಸ ತೆಗೆದುಕೊಳ್ಳಬೇಕೆಂದು ಬೆಳಿಗ್ಗೆ ನನಗೆ ಫೋನ್ ಕರೆ ಮಾಡಿ ತಿಳಿಸಿರುವುದರಿಂದ ಬೇರೆ ದಿವಸ ತೆಗೆದುಕೊಳ್ಳುತ್ತೇನೆ.

ದೊಡ್ಡ ಬಳ್ಳಾಪುರ ತಾಲ್ಲೂಕಿನಲ್ಲಿರುವ ಅಂಗನವಾಡಿ ಕೇಂದ್ರಗಳಿಗೆ ಕಟ್ಟಡಗಳನ್ನು ನಿರ್ಮಿಸುವುದು

411 (3659) ಶ್ರೀ ಕೃಷ್ಣಪ್ಪ ಎ. (ದೊಡ್ಡಬಳ್ಳಾಪುರ) ಮಾನ್ಯ ಮಹಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು: ಇವುಗಳಲ್ಲಿ ಸ್ವಂತ ಕಟ್ಟಡಗಳಿರುವ ಸಂಖ್ಯೆ ಎಷ್ಟು: ಇಲ್ಲದೇ ಇರುವ ಸಂಖ್ಯೆ ಎಷ್ಟು:

ಆ) ಕಳೆದ 3 ವರ್ಷಗಳಿಂದ ತಾಲ್ಲೂಕಿಗೆ ಮಂಜೂರಾದ ಕಟ್ಟಡಗಳೆಷ್ಟು: ಯಾವ ಯಾವ ಗ್ರಾಮಗಳಲ್ಲಿ ನಿರ್ಮಿಸಲಾಗಿದೆ:

ಇ) ಬಾಕಿ ಉಳಿದ ಕಟ್ಟಡಗಳನ್ನು ಕಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) 224 ಅಂಗನವಾಡಿ ಕೇಂದ್ರಗಳು
69 ಸ್ವಂತ ಕಟ್ಟಡ
155 ಕೇಂದ್ರಗಳಿಗೆ ಸ್ವಂತ ಕಟ್ಟಡ ಇಲ್ಲ.

ಆ) ಕಳೆದ 3 ವರ್ಷಗಳಿಂದ ಇಲಾಖಾ ವತಿಯಿಂದ ನಿರ್ಮಿಸಲು 19 ಕಟ್ಟಡಗಳನ್ನು ನಿರ್ಮಿಸಲಾಗಿದೆ. (ಪಟ್ಟಿ ಲಗತ್ತಿಸಿದೆ)

ಇ) ಅನುದಾನದ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 3659 ರ ಅನುಬಂಧ

ಕಳೆದ 3 ವರ್ಷಗಳಲ್ಲಿ ನಿರ್ಮಿಸಿರುವ ಅಂಗನವಾಡಿ ಕಟ್ಟಡಗಳ ವಿವರ

ಕ್ರಮ	ವರ್ಷ	ಗ್ರಾಮಗಳ ಹೆಸರು
1.	2000-01	ಹೊನ್ನಾವರ
		ಗೆಜ್ಜಗದ ಹಳ್ಳಿ
		ದೊಡ್ಡತುಮಕೂರು
		ಗುಂಡಮೆಗೆರೆ
		ತೊಗರಿಘಟ್ಟ
2.	2001-02	ಶ್ಯಾಕಲದೇವನಪುರ
		ಕುಂಟನಹಳ್ಳಿ
		ಕೆಸ್ತೂರು
		ಹಾದ್ರಿಪುರ
		ನಾರನಹಳ್ಳಿ